ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಡಾ|| ಬಿ.ಆರ್.ಅಂಬೇಡ್ಕರ್ ರಸ್ತೆ,
ಬೆಂಗಳೂರು-560001.
Tel.: 080 2203 4069/ 080 2203 4070.
e-mail: director.idd@gmail.com, website : www.idd.karnataka.gov.in

---

## ಅಧಿಸೂಚನೆ

**ಸಂಖ್ಯೆ:ಐಡಿಡಿ 120 ಐಟಿಎಸ್ 2021** **ದಿನಾಂಕ:13.02.2023**

**ವಿಷಯ: ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಸಣ್ಣ ಪ್ರಮಾಣದ ಮೂಲಸೌಕರ್ಯ ಯೋಜನೆಗಳ ಅನುಷ್ಠಾನಕ್ಕಾಗಿ ಸಮಾಲೋಚಕ ಸಲಹೆಗಾರರನ್ನು ಎಂಪ್ಯಾನಲ್ ಮಾಡುವುದು.**

1. ಭಾರತ ಸರ್ಕಾರವು ಮೂಲಸೌಕರ್ಯದಲ್ಲಿ ಖಾಸಗಿ ಹೂಡಿಕೆಗೆ ಅನುಕೂಲವಾಗಲು ನೀತಿಯನ್ನು ಅಳವಡಿಸಿಕೊಂಡು, ದೇಶದಾದ್ಯಂತ ಮೂಲಸೌಕರ್ಯದಲ್ಲಿ ಖಾಸಗಿ ಹೂಡಿಕೆಗೆ ಅನುವು ಮಾಡಿಕೊಡುವ ವಾತಾವರಣವನ್ನು ಸೃಷ್ಟಿಸಿದೆ.

2. ಕರ್ನಾಟಕ ಸರ್ಕಾರವು ತನ್ನ ಸಂಸ್ಥೆಗಳ ಮೂಲಕ ಮೂಲಸೌಕರ್ಯ ನೀತಿ-2018 ರಲ್ಲಿ ಕಡ್ಡಾಯಗೊಳಿಸಲಾದ 14 ವಲಯಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಮೂಲಸೌಕರ್ಯ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

3. ಈ ನೀತಿಯ ಅನುಷ್ಠಾನಕ್ಕೆ ಪಿಪಿಪಿ ವಹಿವಾಟುಗಳ ಸೂಕ್ತತೆ ಮತ್ತು ಕಾರ್ಯಸಾಧ್ಯತೆಯನ್ನು ನಿರ್ಧರಿಸುವ ಹಾಗೂ ಒಪ್ಪಿದ ವಹಿವಾಟುಗಳನ್ನು ಅನುಷ್ಠಾನಗೊಳಿಸುವ ಸಾಮರ್ಥ್ಯದ ಅಗತ್ಯವಿರುತ್ತದೆ. ಸರ್ಕಾರ, ಅರೆ-ಸರ್ಕಾರಿ, ಸ್ಥಳೀಯ ಮತ್ತು ಪುರಸಭೆಯ ಮಟ್ಟಕ್ಕೆ ಸಂಬಂಧಿಸಿದ ಇಲಾಖೆ/ಸಂಸ್ಥೆಗಳು (ಇನ್ನು ಮುಂದೆ ಪ್ರಾಯೋಜಕ ಪ್ರಾಧಿಕಾರಗಳು ಎಂದು ಪ್ರಸ್ತಾಪಿಸುವುದು) ಪಿಪಿಪಿ ವಹಿವಾಟುಗಳನ್ನು ಅನುಷ್ಠಾನಗೊಳಿಸಲು ಸೂಕ್ತ ಸಲಹಾ ಬೆಂಬಲಕ್ಕೆ ಪ್ರವೇಶಾವಕಾಶ ಹೊಂದಿರುತ್ತದೆ.

4. ಅದರಂತೆ, ಕರ್ನಾಟಕ ಸರ್ಕಾರವು, ಪಿಪಿಪಿ ಯೋಜನೆಗಳ ಅನುಷ್ಠಾನದಲ್ಲಿ ಪ್ರಾಯೋಜಕ ಪ್ರಾಧಿಕಾರಗಳಿಗೆ ನೆರವಾಗಲು, ಸಮಾಲೋಚಕ ಸಲಹೆಗಾರರನ್ನು

ಎಂಪ್ಯಾನಲ್ (ವರ್ಗ-A: ಯೋಜನಾ ವೆಚ್ಚ ರೂ.500 ಕೋಟಿವರೆಗೆ ಮತ್ತು ವರ್ಗ-B: ಯೋಜನಾ ವೆಚ್ಚ ರೂ.500 ಕೋಟಿ ಮೇಲ್ಪಟ್ಟು ಮತ್ತು ರೂ.1500 ಕೋಟಿವರೆಗೆ) ಮಾಡಿ ಅಧಿಸೂಚನೆ ಸಂಖ್ಯೆ. IDD 1 ITS 2019 ರ ದಿನಾಂಕ 10.10.2019 ರಲ್ಲಿ ಅಧಿಸೂಚನೆ ಹೊರಡಿಸಿರುತ್ತದೆ.

5. ಈ ಮಧ್ಯೆ ಪಿಪಿಪಿ ಮಾದರಿಯಲ್ಲಿ ಸಣ್ಣ ಪ್ರಮಾಣದ ಮೂಲಸೌಕರ್ಯ ಯೋಜನೆಗಳ ಅನುಷ್ಠಾನಕ್ಕಾಗಿ ಪ್ರತ್ಯೇಕ ಸಮಾಲೋಚಕ ಸಲಹೆಗಾರರ ಪ್ಯಾನಲ್ ರಚಿಸುವ ಅಗತ್ಯತೆಯ ಬಗ್ಗೆ ಮನಗೊಳ್ಳಲಾಯಿತು. ಅದರಂತೆ, ಪಿಪಿಪಿ ನೀತಿ-2018 ರಲ್ಲಿ ನೀಡಲಾಗಿರುವ ಎಲ್ಲಾ ವಲಯಗಳಿಗೆ ಅನ್ವಯವಾಗುವಂತೆ ಸಮಾಲೋಚಕ ಸಲಹೆಗಾರರನ್ನು ಎಂಪ್ಯಾನಲ್ ಮಾಡಲಾಗಿದೆ (ವರ್ಗ-ಅ: ರೂ. 100 ಕೋಟಿ ವರೆಗಿನ ಬಂಡವಾಳ ಹೂಡಿಕೆ ಮತ್ತು ವರ್ಗ-ಆ: ರೂ. 100 ಕೋಟಿಗಿಂತ ಹೆಚ್ಚಿನ ಬಂಡವಾಳ ಹೂಡಿಕೆ ಮತ್ತು ರೂ. 200 ಕೋಟಿಗಿಂತ ಕಡಿಮೆ ಅಥವಾ ಸಮನಾಗಿರುವ ಬಂಡವಾಳ ಹೂಡಿಕೆ). ಎಂಪ್ಯಾನಲ್ ಮಾಡಲಾದ ಸಮಾಲೋಚಕ ಸಲಹೆಗಾರರ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಈ ಪಟ್ಟಿಯು ಸಮಗ್ರ ಅಥವಾ ನಿರ್ಣಾಯಕವಲ್ಲ.

6. ಸಣ್ಣ ಪ್ರಮಾಣದ ಪಿಪಿಪಿ ಯೋಜನೆಗಳಿಗೆ ರಿಯಾಯತುದಾರರ ಆಯ್ಕೆಗೆ ಅನುಕೂಲವಾಗುವಂತೆ ಸಮಾಲೋಚಕ ಸಲಹೆಗಾರರನ್ನು ನೇಮಿಸಲು ಸರ್ಕಾರ, ಅರೆ ಸರ್ಕಾರ, ಸ್ಥಳೀಯ ಮತ್ತು ಪುರಸಭೆ ಸೇರಿದಂತೆ ಎಲ್ಲಾ ಪ್ರಾಯೋಜಕ ಪ್ರಾಧಿಕಾರಗಳು ಈ ಪ್ಯಾನಲ್ ಅನ್ನು ಬಳಸಬಹುದು. ಆದಾಗ್ಯೂ, ಪ್ರಾಯೋಜಕ ಪ್ರಾಧಿಕಾರಗಳು ಅರ್ಜಿದಾರರ ಅರ್ಹತೆಗಳು ಮತ್ತು ಆರ್ಥಿಕ ಬಿಡ್‌ಗಳ ಮೌಲ್ಯಮಾಪನ ಪ್ರಕ್ರಿಯೆಯನ್ನು ಅನುಸರಿಸಲು ಮುಕ್ತರಾಗಿರುತ್ತಾರೆ.

7. ಸಣ್ಣ ಪ್ರಮಾಣದ ಮೂಲಸೌಕರ್ಯ ಯೋಜನೆಗಳ ಪಿಪಿಪಿ ವಹಿವಾಟುಗಳಾದ ವಾಣಿಜ್ಯ/ ಆರ್ಥಿಕ ಮತ್ತು ಕಾನೂನು ಸೇವೆಗಳಿಗೆ ಬೆಂಬಲವನ್ನು ಒದಗಿಸುವ ಕೌಶಲ್ಯ ಮತ್ತು ಅನುಭವವನ್ನು ಪ್ಯಾನಲ್ ಸದಸ್ಯರು ಹೊಂದಿರುತ್ತಾರೆ.

8. ಪ್ಯಾನಲ್‌ನಲ್ಲಿರುವ ಸಂಸ್ಥೆಗಳು ಈಗಾಗಲೇ ವಹಿವಾಟು ಸಲಹಾ ಸೇವೆಗಳನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿವೆ ಎಂದು ಮೌಲೀಕರಿಸಿದೆ. ತದನಂತರ, ಪ್ರಾಯೋಜಕ ಪ್ರಾಧಿಕಾರದಿಂದ, ವ್ಯಾಖ್ಯಾನಿಸಲಾಗುವ ನಿರ್ದಿಷ್ಟ ಕಾರ್ಯವ್ಯಾಪ್ತಿಗೆ ಅನುಗುಣವಾಗಿ ಆರ್ಥಿಕ ಪ್ರಸ್ತಾವನೆಯ ಆಧಾರದ ಮೇಲೆ ನೇಮಕಾತಿಯನ್ನು ಮಾಡಬಹುದು.

9. ಪ್ಯಾನಲ್‌ನಲ್ಲಿರುವ ಸಂಸ್ಥೆಗಳು ಸಣ್ಣ ಪ್ರಮಾಣದ ಯೋಜನೆಗಳಿಗೆ ಸಮಾಲೋಚಕ ಸಲಹಾ ಸೇವೆಗಳನ್ನು ಒದಗಿಸಲು ಸಂಬಂಧಿಸಿದ ಸಂಸ್ಥೆಗಳೊಂದಿಗೆ ನೇರವಾಗಿ ಒಪ್ಪಂದ ಮಾಡಿಕೊಳ್ಳುತ್ತಾರೆ. ಅದಾಗ್ಯೂ, ಪ್ಯಾನಲ್ ನ ಬಳಕೆ ಮತ್ತು ಪ್ಯಾನಲ್ ಸದಸ್ಯರ ಕಾರ್ಯಕ್ಷಮತೆಯ ಬಗ್ಗೆ ಮೂಲಸೌಕರ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಮೂಅಬಂ&ಒಜಸಾಇ) ಗೆ ಮಾಹಿತಿಯನ್ನು ಒದಗಿಸಬೇಕು. ಸಮಾಲೋಚಕ ಸಲಹೆಗಾರರ ನಿಯಮಿತಕಾರ್ಯವು ಪೂರ್ಣಗೊಂಡ ನಂತರ ಅಂತಿಮ ವರದಿಯನ್ನು ಮೂಅಬಂ&ಒಜಸಾಇ ಗೆ ಒದಗಿಸಬೇಕಾಗಿರುತ್ತದೆ.